# ಓದುವ ಹವ್ಯಾಸವನ್ನು ಉತ್ತೇಜಿಸಲು ಗ್ರಂಥಾಲಯಗಳ ಪಾತ್ರ

**ರಾಕೇಶ್ ರೌತನ್**



೨೦೧೨ರಲ್ಲಿ ಉತ್ತರಾಖಂಡದ ಉಧಮ್ ಸಿಂಗ್ ನಗರ ಜಿಲ್ಲೆಯ ದಿನೇಶ್ಪುರ್ ಕ್ಷೇತ್ರದಲ್ಲಿ ನಮ್ಮ ಶಾಲೆಯನ್ನು ಆರಂಭಿಸಲಾಯಿತು. ನಮ್ಮ ಶಾಲೆಯಲ್ಲಿ ಹನ್ನೆರಡು ಶಿಕ್ಷಕರೂ ಮತ್ತು ಸುಮಾರು ಎಂಬತ್ತು ಮಕ್ಕಳೂ ಇದ್ದಾರೆ. ಆರಂಭದಲ್ಲಿ ನಮ್ಮ ಶಾಲೆಯಲ್ಲಿ ಸಂಪನ್ಮೂಲಗಳೂ ಸೀಮಿತವಾಗಿದ್ದವು, ಆದರೆ ಆ ದತ್ತ ಸೀಮಿತ ಸಂಪನ್ಮೂಲಗಳನ್ನು ಬಳಸಿ ನಾವು ಮಕ್ಕಳ ಕಲಿಕೆಯಲ್ಲಿ ಒಳ್ಳೆಯ ಪ್ರಯತ್ನವನ್ನೇ ಹಾಕಿದೆವು. ಉದಾಹರಣೆಗೆ, ಮಕ್ಕಳಿಗೆ ಓದಲು ೧-೫ ರ ಉತ್ತರಾಖಂಡ್ ರಾಜ್ಯ ಪಠ್ಯಕ್ರಮದ ಪುಸ್ತಕಗಳನ್ನು ಮತ್ತು NCERT ಪುಸ್ತಕಗಳನ್ನು ಬಳಸಿದೆವು.

ಅನಂತರ ನಮ್ಮ ಶಾಲೆಯಲ್ಲಿ ಇದ್ದ ಪಠ್ಯಪುಸ್ತಕಗಳನ್ನು ಬಿಟ್ಟು ಬೇರೆ ಇತರ ಕಥೆ ಪುಸ್ತಕಗಳು ಇರಬೇಕು ಎಂದು ನಮಗೆ ಅನಿಸಿದ್ದರಿಂದ ವಿದ್ಯಾರ್ಥಿಗಳಿಗೆಂದು ಹೊಸ ಕಥೆ ಪುಸ್ತಕಗಳನ್ನು ಕೊಳ್ಳಲು ನಾವು ನಿರ್ಧರಿಸಿದೆವು. ನಮ್ಮ ಶಾಲೆಯಲ್ಲಿರುವ ಆರಂಭಿಕ ಕಲಿಕಾರ್ಥಿಗಳ ತಿಳಿವಳಿಕೆಯ ಮಟ್ಟಕ್ಕೆ ಹೊಂದುವಂತಹ ಪುಸ್ತಕಗಳನ್ನು ಆಯ್ದುಕೊಳ್ಳಲು ನಮ್ಮ ಜಿಲ್ಲಾ ಸಂಸ್ಥೆಯ ಗ್ರಂಥಪಾಲಕರು ಸಹಾಯ ಮಾಡಿದರು. ಪುಸ್ತಕ ಮೇಳಗಳಿಂದಲೂ ನಾವು ಒಂದಿಷ್ಟು ಪುಸ್ತಕಗಳನ್ನು ನಮ್ಮ ವಿದ್ಯಾರ್ಥಿಗಳಿಗೆಂದು ಕೊಂಡುತಂದೆವು.

ನಮ್ಮ ಹಿಂದಿನ ಶಾಲೆಯು ಬಾಡಿಗೆಯ ಕಟ್ಟಡವಾಗಿದ್ದು ಅಲ್ಲಿ ಯಾವುದೇ ಗ್ರಂಥಾಲಯ ಇಲ್ಲದಿದ್ದುದ್ದರಿಂದ ಅಲ್ಲಿನ ದೊಡ್ಡ ಕೊಠಡಿಯನ್ನೇ ನಾವು ಪುಸ್ತಕಗಳ ಹಂಚಿಕೆಗೆಂದು ಬಳಸಿಕೊಳ್ಳುತ್ತಿದ್ದೆವು. ಆ ಕೊಠಡಿಯು ಭಿನ್ನವಾಗಿತ್ತು; ಅಲ್ಲಿ ಸಾಮಾನ್ಯವಾಗಿ ಗ್ರಂಥಾಲಯಗಳಲ್ಲಿ ಇರುವಂತೆ ಪುಸ್ತಕದ ಕಪಾಟುಗಳು, ಕುರ್ಚಿಗಳು, ಮೇಜುಗಳು ಮತ್ತು ಓದುವ ಮೂಲೆಗಳಿರಲಿಲ್ಲ. ಆದಾಗ್ಯೂ, ಇದರರ್ಥ ಮಕ್ಕಳು ಓದುವುದನ್ನು ನಾವು ನಿರ್ಬಂಧಿಸಿದೆವು ಎಂದಲ್ಲ. ಇದ್ದಷ್ಟೇ ಅವಕಾಶದಲ್ಲಿ ಮಕ್ಕಳಿಗೆ ಓದಲು ಯಾವ ಸಂಪನ್ಮೂಲಗಳ ಅಗತ್ಯವಿದೆಯೋ ಅದನ್ನು ನಾವು ಸಜ್ಜುಗೊಳಿಸಿದೆವು. ಆರಂಭದಿಂದಲೂ, ನಮ್ಮ ಗ್ರಂಥಾಲಯದ ಕಾರ್ಯನಿರ್ವಹಣೆಗೆ ಯಾವುದೇ ನಿರ್ದಿಷ್ಟ ರಚನೆಯಿರಲಿಲ್ಲ. ಆರಂಭದಿಂದಲೂ, ಮಕ್ಕಳು ತಮ್ಮ ಆಸಕ್ತಿಯ ಪುಸ್ತಕಗಳನ್ನೇ ಆರಿಸಿಕೊಂಡು ಓದಲು ಅವಕಾಶವಿತ್ತೆವು, ಆ ಪುಸ್ತಕಗಳು ಅವರ ತರಗತಿಯ ಮಟ್ಟದ್ದಾಗಿರದೇ ಇದ್ದರೂ ಅವರಿಗೆ ಅದನ್ನು ಓದಲು ಕೊಟ್ಟೆವು. ಬೇರೆಯವರು ಆರಿಸಿ ಕೊಟ್ಟ ಪುಸ್ತಕಗಳನ್ನು ಓದಲು ಅವರಿಗೆ ಬಲವಂತ ಮಾಡುವುದಿಲ್ಲ, ಪುಸ್ತಕಗಳ ಆಯ್ಕೆಯ ಸ್ವಾತಂತ್ರ್ಯವನ್ನು ಸಂಪೂರ್ಣವಾಗಿ ವಿದ್ಯಾರ್ಥಿಗಳಿಗೇ ಬಿಟ್ಟುಕೊಟ್ಟೆವು. ಆ ಸಮಯದಲ್ಲಿ ಅರುವತ್ತೈದು ಪ್ರತಿಶತಕ್ಕಿಂತ ಹೆಚ್ಚಿನ ಮಕ್ಕಳು ಪುಸ್ತಕಗಳನ್ನು ಓದಿದರು ಮತ್ತು ಪುಸ್ತಕಗಳನ್ನು ಅವರು ಮನೆಗೂ ಕೊಂಡೊಯ್ದು ಓದಬಹುದಾಗಿತ್ತು. ಅವರಲ್ಲಿ ಎಷ್ಟು ಮಕ್ಕಳು ನಿಜಕ್ಕೂ ಆಸಕ್ತಿಯಿಂದ ಗಂಭೀರವಾಗಿ ಓದಿದರು ಎನ್ನುವುದನ್ನು ನಾವು ಸ್ಪಷ್ಟವಾಗಿ ಹೇಳಲಾರೆವು, ಆದರೆ ಅವರು ಆ ಪುಸ್ತಕಗಳನ್ನು ನೋಡಿ ತಿರುವಿ ಹಾಕಿದ್ದಂತೂ ಸ್ಪಷ್ಟವಾಗಿತ್ತು. ಏಕೆಂದರೆ ಅದರೊಳಗಿನ ಕಥೆಗಳನ್ನು ಅವರು ತಮ್ಮದೇ ಪದಗಳಲ್ಲಿ ಹೇಳಲು ಸಾಧ್ಯವಾಯಿತು.

## ಪ್ರಕ್ರಿಯೆ

ನಾವು ಎಲ್ಲ ಪುಸ್ತಕಗಳನ್ನು ನೆಲದ ಮೇಲೆ ಒಂದು ಸಾಲಿನಲ್ಲಿ ಎಲ್ಲರಿಗೂ ಕಾಣುವ ರೀತಿಯಲ್ಲಿ ಇಡುತ್ತೇವೆ. ಶಾಲೆಯ ಅವಧಿ ಮುಗಿದ ಅನಂತರ ವಿದ್ಯಾರ್ಥಿಗಳು ಅಲ್ಲಿಗೆ ಬಂದು ನೆಲದ ಮೇಲಿರಿಸಿರುವ ಪುಸ್ತಕಗಳನ್ನು ನೋಡುತ್ತಾರೆ. ಪುಸ್ತಕಗಳನ್ನು ಅವರು ಕೈಗೆತ್ತಿಕೊಂಡು, ಪುಟಗಳನ್ನು ತಿರುವಿ ಹಾಕಿ, ಇತರ ಪುಸ್ತಕಗಳನ್ನು ನೋಡಿದ ನಂತರ ತಮಗೆ ಇಷ್ಟ ಬಂದ ಪುಸ್ತಕವನ್ನು ಆಯ್ದುಕೊಳ್ಳುತ್ತಾರೆ. ಅವರು ತಮ್ಮ ತರಗತಿಗೆಂದು ಕೊಟ್ಟಿರುವ ನೋಟ್ಬುಕ್ನಲ್ಲಿ ಅವರು ಆರಿಸಿಕೊಂಡ ಪುಸ್ತಕದ ವಿವರಗಳನ್ನು ತುಂಬುತ್ತಾರೆ ಮತ್ತು ಅವರು ಆರಿಸಿಕೊಂಡ ಪುಸ್ತಕದ ವಿವರಗಳನ್ನು ದಾಖಲೆ ಮಾಡಿಟ್ಟುಕೊಳ್ಳುವುದು ಅವರದ್ದೇ ಜವಾಬ್ದಾರಿಯಾಗಿದೆ. ಶಿಕ್ಷಕರು ಅವರಿಗೆ ಮಾರ್ಗದರ್ಶನ ನೀಡುತ್ತಾರೆ ಮತ್ತು ಅಗತ್ಯ ಬಿದ್ದರೆ ನೆರವಾಗುತ್ತಾರೆ. ಈ ಪ್ರಕ್ರಿಯೆಯಲ್ಲಿ ಶಾಲೆಯ ಎಲ್ಲಾ ಶಿಕ್ಷಕರೂ ತೊಡಗಿಕೊಂಡಿದ್ದಾರೆ. ಊಟದ ವಿರಾಮದಲ್ಲಿಯೂ ವೃತ್ತಪತ್ರಿಕೆ ಓದುವ ಅವಕಾಶವು ಎಲ್ಲಾ ಮಕ್ಕಳಿಗೂ ಲಭ್ಯವಿರಲೆಂದು ಹಾಗೂ ಒಟ್ಟುಗೂಡಿಕೊಂಡು ಓದಿ ನಂತರ ತಮಗೆ ಆಸಕ್ತಿಕರವಾದ ಸುದ್ದಿಗಳನ್ನು ಚರ್ಚಿಸಲೆಂದು ವೃತ್ತಪತ್ರಿಕೆಯನ್ನು ನಮ್ಮ ಬಳಿ ಇರುವ ಮೇಜಿನ ಮೇಲೆ ಕಟ್ಟಿ ಇಡುತ್ತೇವೆ. ಪ್ರಾರಂಭದಲ್ಲಿ ಪ್ರಾಥಮಿಕ ಹಂತದ ವಿದ್ಯರ್ಥಿಗಳಿಗೆಂದು ನಮ್ಮ ಬಳಿ ಸುಮಾರು ೪೦೦ ಕಥೆ ಪುಸ್ತಕಗಳಿದ್ದವು. ಈ ಪ್ರಕ್ರಿಯೆ ಕಷ್ಟವೆಂದು ಅನಿಸಿದ ವಿದ್ಯಾರ್ಥಿಗಳು ತಮ್ಮ ಶಿಕ್ಷಕರು ಮತ್ತು ಹಿರಿಯ ವಿದ್ಯಾರ್ಥಿಗಳ ನೆರವನ್ನು ಕೇಳಬಹುದು. ಈ ಗ್ರಂಥಾಲಯವನ್ನು ನಡೆಸುವ ಪ್ರಕ್ರಿಯೆಯಲ್ಲಿ ಎಲ್ಲಾ ಶಿಕ್ಷಕರೂ ಪಾಲ್ಗೊಳ್ಳುತ್ತಾರೆ.

ಇದೆಲ್ಲದರ ಜೊತೆ ಜೊತೆಗೇ ಪುಸ್ತಕಗಳನ್ನು ಬಳಸುವುದು ಹೇಗೆ, ಅವುಗಳನ್ನು ಸುಸ್ಥಿತಿಯಲ್ಲಿ ಇಟ್ಟುಕೊಳ್ಳುವುದು ಹೇಗೆ ಎಂಬೆಲ್ಲ ವಿಷಯಗಳ ಬಗ್ಗೆ ವಿದ್ಯಾರ್ಥಿಗಳಿಗೆ ತಿಳಿಸಿಕೊಡುತ್ತೇವೆ. ಮೊದಮೊದಲಿಗೆ ನಾವು ಶಿಕ್ಷಕರೇ ಹರಿದುಹೋದ ಪುಟಗಳನ್ನು ಹೊಲಿಯುವುದು, ಅಂಟಿಸುವುದು ಮಾಡುತ್ತಿದ್ದೆವು. ನಂತರ ಮಕ್ಕಳೇ ಶಿಕ್ಷಕರ ಸಹಾಯದೊಂದಿಗೆ ಆ ಕೆಲಸವನ್ನು ಮಾಡತೊಡಗಿದರು. ನಾವು 'ಪುಸ್ತಕ ಆಸ್ಪತ್ರೆ' ಎಂಬ ಪರಿಕಲ್ಪನೆಯನ್ನು ಅವರಿಗೆ ಪರಿಚಯಿಸಿದ್ದೇವೆ. ಇಲ್ಲಿ ಹರಿದ ಪುಟಗಳನ್ನು ಹೊಲಿದು ರಟ್ಟು ಕಟ್ಟುವ ಅಗತ್ಯವಿರುವಂತಹ ಪುಸ್ತಕಗಳನ್ನು ಒಂದು ಪೆಟ್ಟಿಗೆಯಲ್ಲಿ ಅಲ್ಲೇ ಪುಸ್ತಕಗಳ ಸಮೀಪವೇ ಇಟ್ಟಿರಲಾಗುತ್ತದೆ. ಮತ್ತೆ ಬಳಸಬಹುದಾದ ಸುಸ್ಥಿತಿಯ ಪುಸ್ತಕಗಳು ಎಷ್ಟಿವೆ, ಮುಂದಿನ ಅವಧಿಯಲ್ಲಿ ಬಳಸಬಹುದಾದ ಹರಿದು ಹೋದಂಥವುಗಳಲ್ಲಿ ಎಷ್ಟು ದುರಸ್ತಿ ಮಾಡಬಹುದು ಎಂಬೆಲ್ಲ ವಿವರಗಳನ್ನು ತಿಳಿಯಲೆಂದು ನಾವು ಪ್ರತೀ ಅವಧಿಯ ಕೊನೆಗೆ ಪುಸ್ತಕಗಳ

ದಾಖಲೆಯನ್ನು ಸಹ ಪರಿಶೀಲಿಸುತ್ತೇವೆ. ಇದರ ಆಧಾರದ ಮೇಲೆ ನಮ್ಮ ಗ್ರಂಥಾಲಯಕ್ಕೆ ಎಷ್ಟು ಹೊಸ ಪುಸ್ತಕಗಳನ್ನು ತರಬೇಕು ಎಂಬುದನ್ನು ನಿರ್ಧರಿಸುತ್ತೇವೆ.

## ಅವಲೋಕನ

ಪುಸ್ತಕಗಳನ್ನು ಕೇವಲ ಓದಿದರೆ ಮಾತ್ರ ಸಾಲದು, ಓದಿದ ಪುಸ್ತಕಗಳ ಬಗ್ಗೆ ವಿಚಾರ–ವಿಮರ್ಶೆಯನ್ನೂ ಮಾಡಬೇಕಾಗಿರುವುದು ಎಷ್ಟು ಮುಖ್ಯ ಎನ್ನುವುದು ಶಿಕ್ಷಕರಾದ ನಮಗೆ ಗೊತ್ತು. ಆದ್ದರಿಂದ ನಿತ್ಯವೂ ಮಕ್ಕಳಿಗೆ ಕಥೆಪುಸ್ತಕಗಳನ್ನು ಓದಿಸುವ ರೂಢಿಯನ್ನು ಮಾಡಿದ್ದೇವೆ, ಮತ್ತು ಓದಿದ್ದರ ಮೇಲೆ ಚರ್ಚೆಯನ್ನು ಸಹ ತಪ್ಪದೇ ನಡೆಸುತ್ತೇವೆ. ಅದು ನಮ್ಮ ಸ್ವಂತದ ವ್ಯಕ್ತಿತ್ವವನ್ನು ಬೆಳೆಸುವ ಪ್ರಕ್ರಿಯೆಯಲ್ಲಿ ಮುಖ್ಯ ಪಾತ್ರವನ್ನು ವಹಿಸುತ್ತದೆ. ಸಾಮಾನ್ಯವಾಗಿ ನಮ್ಮ ಇಂಗ್ಲಿಷ್ ಮಾತನಾಡುವ ಕೌಶಲ್ಯವನ್ನು ಬೆಳೆಸುವ ನಿಟ್ಟಿನಲ್ಲಿ ಇದನ್ನು ಮಾಡುತ್ತೇವೆ ಮತ್ತು ಅದು ನಮಗೆ ಬಹಳಷ್ಟು ಲಾಭ ದಾಯಕವಾಗಿ ಪರಿಣಮಿಸಿದೆ ಎಂಬುದನ್ನು ಕಂಡುಕೊಂಡಿದ್ದೇವೆ. ಜನರ ಗುಂಪುಗಳ ಎದುರಿಗೆ ನಮ್ಮ ಆಲೋಚನೆಗಳನ್ನು ವ್ಯವಸ್ಥಿತವಾಗಿ ಸಂಯೋಜಿಸಿ ಅಭಿವ್ಯಕ್ತಿಸುವುದನ್ನು ಕಲಿಯಲು ಅದು ಒಂದು ಅವಕಾಶವನ್ನು ಕಲ್ಪಿಸಿಕೊಡುತ್ತದೆ.

೨೦೧೫ರಲ್ಲಿ ದಿನೇಶಪುರದಲ್ಲಿನ ನಮ್ಮ ಶಾಲೆಯನ್ನು ಸ್ವಂತದ ಕಟ್ಟಡಕ್ಕೆ ಸ್ಥಳಾಂತರಿಸಲಾಯಿತು. ಈಗ ನಮ್ಮ ಶಾಲೆಯು ಒಂದು ದೊಡ್ಡ ಕಟ್ಟಡವನ್ನು ಹೊಂದಿದೆ ಮತ್ತು ಮೂಲಸೌಕರ್ಯಗಳೂ ದೊಡ್ಡ ಪ್ರಮಾಣದಲ್ಲಿಯೇ ಇವೆ. ಈ ನಮ್ಮ ಹೊಸ ಜಾಗದಲ್ಲಿ ಬಹಳಷ್ಟು ಸೌಕರ್ಯಗಳನ್ನು ಹೊಂದಿದ ದೊಡ್ಡದಾದ ಪ್ರತ್ಯೇಕ ಗ್ರಂಥಾಲಯವಿದೆ. ನಮ್ಮ ಗ್ರಂಥಾಲಯದಲ್ಲಿನ ಪುಸ್ತಕ ಸಂಗ್ರಹವೂ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಜಿಲ್ಲಾ ಸಂಸ್ಥೆಯ ಗ್ರಂಥಪಾಲಕರು ಪುಸ್ತಕಗಳ ಆಯ್ಕೆಯಲ್ಲಿ ಸಹಾಯ ಮಾಡುತ್ತಾರೆ ಮತ್ತು ಹೇಗೆ ತರಿಸಿಕೊಳ್ಳುವುದು ಎನ್ನುವುದರ ಬಗೆಗೂ ಮಾರ್ಗದರ್ಶನ ನೀಡಿ ನೆರವಾಗುತ್ತಾರೆ.

ಹೆಚ್ಚಿದ ಸಂಪನ್ಮೂಲಗಳು ಮತ್ತು ಪುಸ್ತಕಗಳ ಲಭ್ಯತೆಯಿಂದಾಗಿ ವಿದ್ಯಾರ್ಥಿಗಳಿಗೆ ಅನುಕೂಲವಾಗಿದೆ. ಈಗ ಗ್ರಂಥಾಲಯದಲ್ಲಿ ವಿದ್ಯಾರ್ಥಿಗಳ ವಯಸ್ಸು ಮತ್ತು ಕಲಿಕೆಯ ಮಟ್ಟಕ್ಕೆ ಅನುಗುಣವಾಗಿ ಅನೇಕ ವಿಧದ ಪುಸ್ತಕಗಳನ್ನು ಇಡಲಾಗಿದೆ. ಮಕ್ಕಳು ತಮ್ಮ ವಿಷಯಗಳಿಗೆ ಸಂಬಂಧಿಸಿದಂತೆ ಆಕರ(reference)ಕ್ಕಾಗಿ ಬಳಸ ಬಹುದಾದ ಅಧ್ಯಯನ ಪುಸ್ತಕಗಳನ್ನೂ ಸಂಯೋಜಿಸಿ ಇಟ್ಟಿದ್ದೇವೆ.

ಆದರೆ ಇಲ್ಲಿ ಕೆಲವು ಸಮಸ್ಯೆಗಳಿದ್ದವು. ವಿದ್ಯಾರ್ಥಿಗಳು ಹೊಸ ಗ್ರಂಥಾಲಯವನ್ನು ಬಳಸಲು ಆರಂಭಿಸಿದ ಕೆಲವು ತಿಂಗಳ ಅನಂತರ ಗ್ರಂಥಾಲಯವು ಸರಿಯಾಗಿ ಕಾರ್ಯ ನಿರ್ವಹಿಸುತ್ತಿಲ್ಲ ಎನ್ನುವುದು ನಮ್ಮ ಗಮನಕ್ಕೆ ಬಂದಿತು. ಪುಸ್ತಕಗಳನ್ನು ಕಪಾಟುಗಳಲ್ಲಿ ಅಸ್ತವ್ಯಸ್ತವಾಗಿ ಇಡಲಾಗಿತ್ತು. ಪುಸ್ತಕಗಳನ್ನು ದಾಖಲೆ ಮಾಡಿಡುವುದು ಕಷ್ಟವಾಗಿತ್ತು. ಪುಸ್ತಕಗಳು ಕಳೆಯುವುದು ಮತ್ತು ಹರಿಯುವುದು ಹೆಚ್ಚಾಗತೊಡಗಿತು. ಈಗ ನಮ್ಮ ಶಾಲೆಯಲ್ಲಿ ಒಂದರಿಂದ ಹತ್ತನೇ ತರಗತಿಯವರೆಗೆ ಇರುವುದರಿಂದ ಬೇರೆ ಬೇರೆ ವಯೋಮಾನಕ್ಕೆ ತಕ್ಕಂತೆ ಬೇರೆ ಬೇರೆ ಆಯ್ಕೆಗಳು ಮತ್ತು ಆಸಕ್ತಿಗಳಿರುತ್ತವೆ ಎಂದು ನಮಗೆ ಅರಿವಾಗತೊಡಗಿತು. ಆದ್ದರಿಂದ ಈಗ ಪುಸ್ತಕಗಳನ್ನು ಆರಿಸುವಾಗ ಈ ಮೇಲಿನ ಅಂಶಗಳನ್ನೂ ಗಮನದಲ್ಲಿಟ್ಟುಕೊಳ್ಳಬೇಕೆಂದು ನಿರ್ಧರಿಸಿದ್ದೇವೆ.

ಹೊಸ ಗ್ರಂಥಾಲಯದಲ್ಲಿ ವಿದ್ಯಾರ್ಥಿಗಳಿಗೆ ತಮ್ಮ ಅಗತ್ಯಕ್ಕೆ ತಕ್ಕಂತೆ ಪುಸ್ತಕಗಳನ್ನು ಆರಿಸಿಕೊಳ್ಳುವುದು ಸುಲಭವಾಗಲೆಂದು ನಾವು ವಿಷಯದ ಪ್ರಕಾರ ಪುಸ್ತಕಗಳನ್ನು ಜೋಡಿಸುತ್ತೇವೆ. ಹಿಂದಿ ಕಥೆಗಳು, ಇಂಗ್ಲಿಷ್ ಕಥೆಗಳು, ಗಣಿತ, ವಿಜ್ಞಾನ, ಸಮಾಜ ವಿಜ್ಞಾನಕ್ಕೆ ಸಂಬಂಧಿಸಿದ ನಿಯತಕಾಲಿಕೆಗಳು, ವೃತ್ತಪತ್ರಿಕೆಗಳು ಮತ್ತು ದಿನಪತ್ರಿಕೆಗಳ ಕಪಾಟುಗಳಿವೆ. ಪುಸ್ತಕಗಳನ್ನು ಆರಿಸಿಕೊಂಡ ವಿದ್ಯಾರ್ಥಿಗಳು ತಮ್ಮ ಅವಧಿ ಮುಗಿದ ಅನಂತರ ಮರಳಿ ಆ ಪುಸ್ತಕಗಳನ್ನು ಎಲ್ಲಿಡಬೇಕೋ ಅಲ್ಲಿಡದೇ ಬೇರೆ ಇತರ ಕಪಾಟುಗಳಲ್ಲಿ ಇಡುತ್ತಾರೆ. ಹೀಗಾಗಿ, ಪುಸ್ತಕಗಳನ್ನು ಇಡಬೇಕಾದ ಜಾಗದಲ್ಲಿಡದ ಕಾರಣ ಹೊಸ ತರಗತಿಯ ಮಕ್ಕಳು ಗ್ರಂಥಾಲಯವನ್ನು ಪ್ರವೇಶಿಸಿದಾಗ ತಮ್ಮ ಆಯ್ಕೆಯ ಪುಸ್ತಕಗಳನ್ನು ಹುಡುಕಿ ಆರಿಸಿಕೊಳ್ಳಲು ಹೆಚ್ಚು ಶ್ರಮ ವ್ಯಯಿಸಬೇಕಾಗುತ್ತದೆ.

ಈಗ ನಮ್ಮ ಶಾಲೆಯಲ್ಲಿ ಓದುತ್ತಿರುವ ಮಕ್ಕಳ ಸಂಖ್ಯೆ ೩೫೦ಕ್ಕೆ ಏರಿದೆ. ಈಗ ಒಂದರಿಂದ ಹತ್ತರವರೆಗಿನ ತರಗತಿಗಳು ಇಲ್ಲಿ ನಡೆಯುತ್ತವೆ ಮತ್ತು ಶಿಕ್ಷಕರು ಒಟ್ಟೂ ಹದಿನೈದು ಇದ್ದಾರೆ. ಗ್ರಂಥಾಲಯದ ಪುಸ್ತಕಗಳ ಸಂಖ್ಯೆಯೂ ಹೆಚ್ಚಿದೆ. ಈಗ ಶಿಕ್ಷಕರು ತರಗತಿ ಪ್ರಕ್ರಿಯೆಗಳಿಗೆ ಮತ್ತು ತಾವು ಕಲಿಸುತ್ತಿರುವ ವಿಷಯಗಳಿಗೆ ಸಂಬಂಧಿಸಿದ ಕೆಲಸಗಳಿಗೆ ಹೆಚ್ಚಿನ ಸಮಯವನ್ನು ಮೀಸಲಾಗಿಡಬೇಕಾಗುತ್ತಿದೆ. ಹೀಗಾಗಿ ಗ್ರಂಥಾಲಯದ ಚಟುವಟಿಕೆಗಳಲ್ಲಿ ಅವರು ಮುಂಚಿನಂತೆ ಅತ್ಯಾಸಕ್ತಿಯಿಂದ ತೊಡಗಿಕೊಳ್ಳುವುದು ಕಷ್ಟವಾಗಿದೆ. ಸಕ್ರಿಯ ಮತ್ತು ನಿಯಮಿತ ಓದುಗರ ಪ್ರಮಾಣದಲ್ಲಿ ಏರಿಕೆಯೇನೂ ಆಗಿಲ್ಲ ಮತ್ತು ಪುಸ್ತಕಗಳಲ್ಲಿ ಆಸಕ್ತಿ ತೋರಿಸುವವರು ಸಹ ಅವರ ಮೊದಲ ಆಯ್ಕೆಯಾಗಿ ಸಣ್ಣಕಥೆಗಳ ಪುಸ್ತಕಗಳನ್ನು ಇಷ್ಟಪಡುತ್ತಾರೆ. ಆಕರದ ಪುಸ್ತಕಗಳಲ್ಲಿ ಮತ್ತು ಗಂಭೀರ ಓದಿಕೆಯಲ್ಲಿ ಆಸಕ್ತಿ ಹೊಂದಿದವರು ಇನ್ನೂ ಕಡಿಮೆ.

ಆದಾಗ್ಯೂ, ವಿದ್ಯಾರ್ಥಿಗಳಲ್ಲಿ ಓದುವ ಹವ್ಯಾಸವನ್ನು ಬೆಳೆಸಲು ಗ್ರಂಥಾಲಯಗಳ ಪಾತ್ರವು ಎಷ್ಟು ಮಹತ್ವದ್ದು ಎಂಬುದನ್ನು ನಾವು ಮನಗಂಡಿರುವುದರಿಂದ ನಮ್ಮ ತರಗತಿಗಳಲ್ಲಿ ದಿನವೂ ನಡೆಯುವಂತಹ ಗ್ರಂಥಾಲಯ ಅವಧಿಯೊಂದನ್ನು ಪರಿಚಯಿಸಲು ನಾವು ನಿರ್ಧರಿಸಿದ್ದೇವೆ. ವಿದ್ಯರ್ಥಿಗಳಿಗೆ ನಿತ್ಯವೂ ಪುಸ್ತಕಗಳನ್ನು ಓದುವ ಸಮಯಾವಕಾಶ ಇದೆ. ಪುಸ್ತಕಗಳನ್ನು ಮಕ್ಕಳ ತರಗತಿ ಹಾಗೂ ಅವರ ಇಂಗ್ಲಿಷ್ ಮತ್ತು ಹಿಂದಿ ಪ್ರೌಢಿಮೆಯ ಮಟ್ಟಕ್ಕೆ ಅನುಗುಣವಾಗಿ ಮಕ್ಕಳು ನಿತ್ಯವೂ ವಿವಿಧ ಪ್ರಕಾರದ ಪುಸ್ತಕಗಳನ್ನು ಓದುವ ಅವಕಾಶ ಕಲ್ಪಿಸಲು ಅವರ ತರಗತಿಕೋಣೆಗಳಲ್ಲಿಯೇ ಒಂದು ತಿಂಗಳವರೆಗೆ ಜೋಡಿಸಿ ಇಡಲಾಗಿದೆ. ಮಕ್ಕಳು ಒಂದೇ ರೀತಿಯ ಪುಸ್ತಕಗಳನ್ನು ಓದುತ್ತ ಉಳಿದರೆ ಅವರಿಗೆ ನಂತರ ಅನಾಸಕ್ತಿ ಹುಟ್ಟಬಹುದು ಎಂದು ತಿಳಿದಿರುವುದರಿಂದ ಪುಸ್ತಕಗಳನ್ನು ನಿರ್ದಿಷ್ಟ ಅವಧಿಯ ನಂತರ ಬದಲಾಯಿಸಿ ಬೇರೆ ಪುಸ್ತಕಗಳನ್ನು ತಂದಿಡುವುದು ಎಂದು ನಿರ್ಧರಿಸಲಾಯಿತು.

ಪುಸ್ತಕಗಳನ್ನು ಪ್ರಾಥಮಿಕ ತರಗತಿಗಳು, ಹಿರಿಯ ಪ್ರಾಥಮಿಕ (ಮಾಧ್ಯಮಿಕ) ತರಗತಿಗಳು, ಪ್ರೌಢಶಾಲಾ ತರಗತಿಗಳ ಮಟ್ಟಕ್ಕೆ ಅನುಗುಣವಾಗಿ ಮತ್ತು ಹಿಂದಿ, ಇಂಗ್ಲಿಷ್ ಕಥೆ ಪುಸ್ತಕಗಳು ಹೀಗೆ ವಿಂಗಡಿಸಿ ಪ್ರತ್ಯೇಕ ಕಪಾಟುಗಳಲ್ಲಿ ಜೋಡಿಸಿ ಇಡಲೂ ಸಹ ನಾವು ಯತ್ನಿಸಿದ್ದೇವೆ. ವಿವಿಧ ವಿಷಯಗಳ ನಡುವೆ ವ್ಯತ್ಯಾಸವನ್ನು ಗುರುತಿಸಲು ನಾವು ಬಣ್ಣದ ಹಾಳೆಯ ತುಣುಕುಗಳನ್ನು

ಅಂಟಿಸಿದ್ದೇವೆ. ಪ್ರಾಥಮಿಕ ತರಗತಿಗಳ ಪುಸ್ತಕಗಳನ್ನು ಕೆಳಗಿನ ಸ್ತರಗಳಲ್ಲಿ, ಹಿರಿಯ ಪ್ರಾಥಮಿಕ (ಮಾಧ್ಯಮಿಕ) ತರಗತಿಗಳ ಪುಸ್ತಕಗಳನ್ನು ಮಧ್ಯದ ಸ್ತರಗಳಲ್ಲಿ, ಹಾಗೂ ಪ್ರೌಢ ತರಗತಿಗಳ ಪುಸ್ತಕಗಳನ್ನು ಮೇಲಿನ ಸ್ತರಗಳಲ್ಲಿ ಜೋಡಿಸಿಟ್ಟಿದ್ದೇವೆ. ಈ ವ್ಯವಸ್ಥೆಯು ಸರಿಯಾಗಿ ನಡೆಯುತ್ತಿದೆಯಾದರೂ ಕೆಲವು ದಿನಗಳ ಅನಂತರ ಪುಸ್ತಕಗಳು ಜಾಗ ತಪ್ಪಿ ಒಂದು ವಿಭಾಗದೊಳಗೆ ಮತ್ತೊಂದು ವಿಭಾಗದ ಪುಸ್ತಗಳು ಬೆರೆತು ಹೋಗುತ್ತವೆ.

## ಯೋಜನೆ

ಓದುವ ಪ್ರಕ್ರಿಯೆಗಳು ಎಲ್ಲ ವ್ಯವಸ್ಥಿತಗೊಂಡು ನಿಯಮಿತವಾಗಿ ನಡೆಯತೊಡಗಿದ ಅನಂತರ ನಾವು ವಿದ್ಯಾರ್ಥಿಗಳಿಗೆ ಕಥೆಗಳನ್ನು ಹಂಚಿಕೊಳ್ಳುವುದು, ಕಥೆಗಳ ಭಾಗಗಳನ್ನು ಗಟ್ಟಿಯಾಗಿ ಓದುವುದು, ಮತ್ತು ಕಥೆಗಳನ್ನು ಕುರಿತು ಚರ್ಚಿಸುವುದು ಮುಂತಾದ ಇತರ ಕೆಲವು ಚಟುವಟಿಕೆಗಳನ್ನೂ ನಡೆಸಲು ನಿರ್ಧರಿಸಿದ್ದೇವೆ; ಆ ಮೂಲಕ ವಿದ್ಯಾರ್ಥಿಗಳು ತಮ್ಮ ಅಭಿಪ್ರಾಯಗಳನ್ನು ಮತ್ತು ವಿಚಾರಗಳನ್ನು ಅಭಿವ್ಯಕ್ತಿಸುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳಲಿ ಎನ್ನುವುದೇ ಇದರ ಉದ್ದೇಶವಾಗಿದೆ.

- ನಮ್ಮ ಶಾಲೆಯಲ್ಲಿ ಒಂದು ಗ್ರಂಥಾಲಯ ಸಮಿತಿಯನ್ನು ನಾವು ಹೊಂದಿದ್ದೇವೆ. ಈ ಸಮಿತಿಯು ಗ್ರಂಥಾಲಯವನ್ನು ಇನ್ನೂ ಉತ್ತಮಗೊಳಿಸುವುದು ಹೇಗೆ ಎಂಬುದನ್ನು ಮತ್ತು ಅದು ವಿದ್ಯಾರ್ಥಿಗಳ ಓದುವ ಸಾಮರ್ಥ್ಯವನ್ನು ಸುಧಾರಿಸಲು ಹೇಗೆ ಸಹಾಯ ಮಾಡುತ್ತದೆ ಎಂಬುದನ್ನು ಕುರಿತು ಚರ್ಚಿಸುತ್ತದೆ. ಪ್ರತೀ ವರ್ಷ ಗ್ರಂಥಾಲಯದ ಈ ಎಲ್ಲ ಕೆಲಸಗಳ ಜವಾಬ್ದಾರಿಯನ್ನು ಕೆಲವು ಶಿಕ್ಷಕರು ವಹಿಸಿಕೊಳ್ಳುತ್ತಾರೆ.
- ಪ್ರತೀ ವಿದ್ಯಾರ್ಥಿಗೂ ಶಾಲಾ ಗ್ರಂಥಾಲಯವನ್ನು ಬಳಸಲು ಸಾಧ್ಯವಾಗುವ ರೀತಿಯಲ್ಲಿ ಮತ್ತು ಅವನು/ಅವಳು ತಮ್ಮ ಅಗತ್ಯಗಳು ಹಾಗೂ ಆಸಕ್ತಿಗಳಿಗೆ ಅನುಗುಣವಾಗಿ ಪುಸ್ತಕಗಳನ್ನು ಹುಡುಕಿ ಆಯ್ದುಕೊಳ್ಳಲು ಅನುಕೂಲವಾಗುವಂತೆ ಒಂದು ರೀತಿಯ ವ್ಯವಸ್ಥೆಯನ್ನಿಟ್ಟುಕೊಳ್ಳಲು ಪ್ರಯತ್ನಿಸುತ್ತೇವೆ.
- ಬೇರೆ ಬೇರೆ ಚಟುವಟಿಕೆಗಳಿಗಾಗಿ ಭೂಪಟಗಳು ಮತ್ತು ನಿಘಂಟುಗಳನ್ನು ಬಳಸುವುದರಿಂದ ವಿದ್ಯರ್ಥಿಗಳ ಪದಸಂಪತ್ತು ವರ್ಧಿಸುತ್ತದೆ ಮತ್ತು ಅದು ಓದಿನ ನಿರರ್ಗಳತೆಯನ್ನು ಸುಧಾರಿಸಲು ನೆರವಾಗುತ್ತದೆ.
- ಹಂಚಿಕೊಳ್ಳುವುದು ಮತ್ತು ಚರ್ಚೆಗಳು ಪುಸ್ತಕಗಳನ್ನು ಸರಿಯಾಗಿ ಓದುವ ವಿದ್ಯಾರ್ಥಿಗಳನ್ನು ಪ್ರೇರೇಪಿಸುವುದು ಮಾತ್ರವಲ್ಲದೆ ಇತರ ವಿದ್ಯಾರ್ಥಿಗಳಿಗೆ ತರಗತಿಯ ಎದುರು ತಮ್ಮ ಅಭಿಪ್ರಾಯಗಳನ್ನು ಮಂಡಿಸಲು ಅವಕಾಶಗಳನ್ನು ಕಲ್ಪಿಸಿ ಪ್ರೇರೇಪಿಸುತ್ತದೆ.
- ವಿದ್ಯಾರ್ಥಿಗಳು ಪುಸ್ತಕಗಳೊಂದಿಗೆ ಆಪ್ತ ನಂಟನ್ನು ಹೊಂದಿದರೆ ಅವರು ತಮ್ಮದೇ ಸ್ವಂತದ ಕಥೆಗಳನ್ನು, ಪಾತ್ರಾಭಿನಯದ ಚಟುವಟಿಕೆಗಳಿಗಾಗಿ ಕಥಾವಸ್ತುಗಳನ್ನು ಬರೆಯಬಹುದು ಮತ್ತು ಶಾಲಾ ಸಭೆಯಲ್ಲಿ ವಿದ್ಯಾರ್ಥಿಗಳ ದೊಡ್ಡ ಗುಂಪಿನ ಎದುರು ನಿರರ್ಗಳವಾಗಿ ಓದಬಹುದು.
- ಗ್ರಂಥಾಲಯಕ್ಕೆ ಸಂಬಂಧಿಸಿದ ಎಲ್ಲ ವಿಷಯಗಳಲ್ಲಿಯೂ ವಿದ್ಯಾರ್ಥಿಗಳು ತೊಡಗಿಕೊಳ್ಳಲು ಸಾಧ್ಯವಾಗುವಂತೆ ನೋಡಿಕೊಳ್ಳುವುದು ನಮ್ಮ ಆಶಯವಾಗಿದೆ.

ಹೀಗೆ ಗ್ರಂಥಾಲಯದ ಪುಸ್ತಕಗಳು ಮತ್ತು ಲಭ್ಯವಿರುವ ಸಂಪನ್ಮೂಲಗಳ ಎಡೆಗೆ ವಿದ್ಯಾರ್ಥಿಗಳಲ್ಲಿ ಜವಾಬ್ದಾರಿಯ ಪ್ರಜ್ಞೆಯನ್ನು ಬೆಳೆಸಲು ಹಾಗೂ ಪುಸ್ತಕಗಳನ್ನು ಅವರು ಪ್ರೀತಿಸುವಂತೆ ಮಾಡಲು ನಾವು ಯತ್ನಿಸಿದ್ದೇವೆ.

**ರಾಕೇಶ್** ಅವರು ಉತ್ತರಾಖಂಡ್ ನಲ್ಲಿರುವ ಉಧಮ್ ಸಿಂಗ್ ನಗರದ ಅಜೀಮ್ ಪ್ರೇಮ್ ಜಿ ಶಾಲೆಯಲ್ಲಿ ಅದರ ಪ್ರಾರಂಭದಿಂದಲೂ ಸಮಾಜ ವಿಜ್ಞಾನದ ಶಿಕ್ಷಕರಾಗಿದ್ದಾರೆ. ಅವರು ಭೂಗೋಳಶಾಸ್ತ್ರದಲ್ಲಿ ಮತ್ತು ಶಿಕ್ಷಣಕ್ಕೆ ಸಂಬಂಧಿಸಿದಂತೆ ಸ್ನಾತಕೋತ್ತರ ಪದವಿಗಳನ್ನು ಹೊಂದಿರುತ್ತಾರೆ. ಅಜೀಮ್ ಪ್ರೇಮ್ ಜಿ ಶಾಲೆಯನ್ನು ಸೇರುವ ಮೊದಲು ಅವರು ಈಡನ್ ಮಾಂಟೆಸೋರಿ ಸ್ಕೂಲ್, ಚಮೋಲಿ, ಗಢ್ವಾಲ್ ಮತ್ತು ಸೇಂಟ್ ತೆರೆಸಾ ಕಾನ್ವೆಂಟ್ ಸ್ಕೂಲ್, ಶ್ರೀನಗರ, ಗಢ್ವಾಲ್ ನಲ್ಲಿ ಕಾರ್ಯನಿರ್ವಹಿಸಿರುತ್ತಾರೆ. ಅವರನ್ನು rakesh.rauthan@azimpremjifoundation.org ನಲ್ಲಿ ಸಂಪರ್ಕಿಸಬಹುದು.